## 16

# ಪ್ರಾರ್ಥನೆಯ ಕುಡಿತ ಪ್ರಾಯೋಗಿಕವಾದ ನಿರ್ದೇಶನ (5:13-18)

17ನೇ ವಚನದಲ್ಲಿ ಸರಿಯಾದ ನಿರ್ದೇಶನವಿದೆ, "ಎಲೀಯನು ನಮ್ಮಂತ ಸ್ವಭಾವವುಳ್ಳವನಾಗಿದ್ದನು ... ." ನಿಮ್ಮ ವಿಷಯವಾಗಿ ನನಗೆ ತಿಳಿದಿರುವದಿಲ್ಲ, ಆದರೆ ಹೇಳಿಕೆಯಲ್ಲಿ ಒಂದು ಸಮಸ್ಯೆಯ ಎದುರಾಗಿದೆ. ಎಲೀಯನು ಸಹ ನನ್ನ ಹಾಗೆ ಇದ್ದನು. ಎಂದು ತಿಳಿಯಲು ಪ್ರಯತ್ನಿಸುವದು ಅದೇ ನನ್ನ ಸಮಸ್ಯೆ ಯಾಕಂದರೆ ಯಾಕೋಬನೇ ಅದನ್ನು ತಿಳಿಸಿದನು!

ಎಲೀಯನನ್ನು ನೆನಪು ಮಾಡಿಕೊಳ್ಳುವಿರಾ? ಅವನು ಆಹಾಬನಿಗೆ ವಿರುದ್ಧವಾಗಿ ನಿಂತು ಅವನನ್ನು ಧೈರ್ಯದಿಂದ ಎದುರಿಸಿದ ಹಳೆ ಒಡಂಬಡಿಕೆಯ ಪ್ರವಾದಿಯಾಗಿದ್ದನು. ದುಷ್ಟ ಆಹಾಬನಿಗೆ ಅವನ ರಾಜ್ಯದಲ್ಲಿ ಮೂರು ವರ್ಷಗಳ ಕಾಲ ಮಳೆ ಬರುವದಿಲ್ಲವೆಂದು ಹೇಳಿದನು. ಅವನು ಪ್ರಾರ್ಥನಾವೀರನಾಗಿ ಸತ್ತು ಹೋದ ಬಾಲಕನಿಗಾಗಿ ದೇವರಿಗೆ ನಂಬಿಕೆಯಿಂದ ಪ್ರಾರ್ಥಿಸಿದನು, ಆಗ ಹುಡುಗನು ತಿರುಗಿ ಬದುಕಿದನು. ಅವನು ಭಯಪಡದವನಾಗಿ, ದೇವರ ಸತ್ಯವನ್ನು ಕಾಪಾಡುವವನಾಗಿ, ಬಾಳನ 450 ಪ್ರವಾದಿಗಳಿಗೂ ಮತ್ತು ಅಶೇರನ 400 ಪ್ರವಾದಿಗಳಿಗೂ ಸವಾಲನ್ನು ಹಾಕಿದನು. ಅವನು ದೇವರಿಗೆ ಪ್ರಾರ್ಥಿಸಿದಾಗ ಕರ್ಮೆಲ ಬೆಟ್ಟದ ಮೇಲೆ, "ಪರಲೋಕದಿಂದ ಬೆಂಕಿ ಇಳಿದು ಬಂತು" ಮತ್ತು ಆ ಎಲ್ಲಾ ಪ್ರವಾದಿಗಳ ತಲೆಯನ್ನು ಕಡಿದುಹಾಕುವ ಮೂಲಕ ಜಯದ ಉತ್ಸವ ನೇರವೇರಿತು. ಈ 20ನೇ ಶತಮಾನದ ಒಬ್ಬ ಸಾಧಾರಣ ಮಾನವನು ಎಲೀಯನಹಾಗಿರುವದಕ್ಕೆ ಹೇಗೆ ಸಾಧ್ಯ?

ಪ್ರಾರ್ಥನೆ ಮಾಡುವವರು ಉನ್ನತವಾದ ಜನರೆಂದು ಯಾಕೋಬ ತಿಳಿಸುತ್ತಿದ್ದಾನೆ! ಅವರು ಪ್ರಾರ್ಥನೆಯ ಬಗ್ಗೆ ಮಾತನಾಡುವವರಲ್ಲಿ ಪ್ರಾರ್ಥನೆಯಲ್ಲಿರುವ ನಂಬಿಕೆಯನ್ನು ಪ್ರದರ್ಶಿಸುವವರಲ್ಲ, ಅಥವಾ ಪ್ರಾರ್ಥನೆಯ ಕುರಿತು ವಿವರಿಸುವವರಲ್ಲ. ತಗ್ಗಿದವರು ಮಾತ್ರ ದೇವರ ನಿಜವಾದ ಜನರಾಗಿದ್ದಾರೆ. ಸಮರ್ಪಿಸಿಕೊಂಡವರು ಪ್ರಾರ್ಥನೆಗಾಗಿ, ಪ್ರತ್ಯೇಕವಾದ ಸಮಯವನ್ನು ಇಟ್ಟಿರುತ್ತಾರೆ. ಉಳಿದವರ ಹಾಗೆ ಅವರಿಗೆ ಬೇರೆ ಸಮಯವಿರುವದಿಲ್ಲ; ಬೇರೆ ವಿಷಯಗಳ ಸಮಯಕ್ಕಿಂತಲೂ ಪ್ರಾರ್ಥನೆಯ ಸಮಯವು ಅವರಿಗೆ ಅಮೂಲ್ಯವಾಗಿರುತ್ತದೆ. ಅವರು ದೇವರ ಬಲದಲ್ಲಿ ನಂಬಿಕೆಯಿಟ್ಟು ದೇವರು ತನ್ನ ಮಕ್ಕಳ ಪ್ರಾರ್ಥನೆಯನ್ನು ಕೇಳುತ್ತಾನೆ ಮತ್ತು ಉತ್ತರಿಸುತ್ತಾನೆಂದು ದೃಢನಂಬಿಕೆಯಲ್ಲಿರುತ್ತಾರೆ, ಎಲೀಯನ ಹಾಗೆ ಈ ಜನರು ಸಹ ಪ್ರಾರ್ಥನೆಯ ಮೂಲಕ ತಮ್ಮ ಬಲವನ್ನು ಹೊಂದಿಕೊಳ್ಳುತ್ತಾರೆ.

ಯಾಕೋಬನ ಪತ್ರಿಕೆಯು ಸ್ವಭಾವತಃ ಪ್ರಾಯೋಗಿಕವಾಗಿರುವದರಿಂದ ಸ್ವಾಭಾವಿಕವಾಗಿ ಪ್ರಾರ್ಥನೆಯ ಕುರಿತಾಗಿಯೇ ಬೋಧಿಸುತ್ತದೆ! ನಮ್ಮ ಜೀವಿತದಲ್ಲಿ ಪ್ರಾರ್ಥನೆಯು ಉಂಟು ಮಾಡುವಂತ ವ್ಯತ್ಯಾಸಗಳನ್ನು ತೋರಿಸುತ್ತಾನೆ, ಯಾಕೋಬ 5:13 ರಿಂದ 18ರ ನಮ್ಮ ಪಾಠದಲ್ಲಿ ಪ್ರಾರ್ಥನೆಯ ಕುರಿತಾದ ಕೆಲವು ಮಾರ್ಗದರ್ಶನಗಳನ್ನು ನಾವು ಗಂಭೀರವಾಗಿ ಪರಿಗಣಿಸಿಕೊಳ್ಳಬೇಕು.

### ಪ್ರಾರ್ಥನೆಯ ಅಗತ್ಯವಿರುವ ಕೆಲವು ಸಂದರ್ಭಗಳು

ಯಾಕೋಬನ, ಪತ್ರಿಕೆಯಲ್ಲಿ ಪ್ರಾರ್ಥನೆಯು ಕ್ರೀಯಾರೂಪದಲ್ಲಿರುವದು, ಪ್ರಾರ್ಥನೆಯ

ಕುರಿತಾದ ಬೋಧನೆಯು ತೀವ್ರವಾಗಿ ಪ್ರಾಯೋಜಿಸಲ್ಪಟ್ಟಿದೆ. ಮತ್ತು ಪ್ರಾರ್ಥನೆಯ ಅಗತ್ಯವಿರುವ ಸಮಯ ಸಂದರ್ಭಗಳನ್ನು ತಿಳಿಸಲಾಗಿದೆ. ನಾವು ತಗ್ಗಿಸಿಕೊಂಡು ದೇವರಲ್ಲಿ ಪ್ರಾರ್ಥಿಸಬೇಕಾದ ಮೂರು ಸಂದರ್ಭಗಳನ್ನು ತೋರಿಸಲಾಗಿದೆ ಸಂಕಷ್ಟದಲ್ಲಿರುವಾಗ ಅನಾರೋಗ್ಯದಲ್ಲಿರುವಾಗ, ಮತ್ತು ಪಾಪಕ್ಕೆ ಒಳಗಾಗುವ ಸಂದರ್ಭ. ಈ ಸಂದರ್ಭಗಳನ್ನು ಒಂದೊಂದಾಗಿ ಧ್ಯಾನ ಮಾಡೋಣ.

ಬಾಧೆಗಳ ಸಮಯದಲ್ಲಿ ಪ್ರಾರ್ಥನೆಯು ಬಹು ಅವಶ್ಯವಾಗಿದೆ. ವಚನ 13ರಲ್ಲಿ, ಯಾಕೋಬನ ಹೇಳಿಕೆ, "ನಿಮ್ಮಲ್ಲಿ ಬಾಧೆಪಡುವವನು ಇದ್ದಾನೋ? ಅವನು ದೇವರನ್ನು ಪ್ರಾರ್ಥಿಸಲಿ ..." NIVಯಲ್ಲಿ ನಮೂದಾಗಿರುವ ಪದದ ಇತರೆ ತರ್ಜುಮೆಗಳು "ಬಾಧೆ" ಎಂಬ ಪದದ ಆಳವಾದ ಅರ್ಥವನ್ನು NIV ತೋರಿಸುತ್ತದೆ. KJVಯಲ್ಲಿ "ವೇದನೆಗೆ ಒಳಪಟ್ಟಾಗ" ಎಂದು NASBಯಲ್ಲಿ ಮತ್ತು ASV, RSVಯಲ್ಲಿ ಬಾಧೆಗಳು ಎಂದು ಉಪಯೋಗಿಸಿದೆ. ಈ ಎಲ್ಲಾ ಪದಗಳಿಗಿಂತ ಗ್ರೀಕ್ ಪದವು ವಿಶಿಷ್ಟವಾಗಿದೆ. ಲೇಟ್ ರಾಬರ್ಟ್‌ರವರು ಈ ರೀತಿಯಾಗಿ ವರ್ಣಿಸಿದ್ದಾರೆ:

> ಸಾಮಾನ್ಯವಾಗಿ ಬಾಧೆಗಳು, ಅನಾರೋಗ್ಯಕ್ಕಿಂತಲೂ ಖಾಯಿಲೆಗಳಿಗಿಂತಲೂ, ವಿಭಿನ್ನವಾಗಿರುತ್ತದೆ. ಕಷ್ಟವನ್ನು ಅನುಭವಿಸುವಾಗ (2 ತಿಮೊಥೆ 2:9) ಸುವಾರ್ತೆ ಸೇವೆಯಲ್ಲಿ ಶ್ರಮೆಯನ್ನು ಅನುಭವಿಸುವಾಗ (2 ತಿಮೋಥೆ 2:3; 4:5). ಪ್ರಾರ್ಥನೆಯು ಉಪಯೋಗಿಸಲ್ಪಟ್ಟಿದೆ. 5:10ರಲ್ಲಿ ಯಾಕೋಬನು ಇದೇ ಪದವನ್ನು ಉಪಯೋಗಿಸಿ "ಬಾಧೆಯನ್ನು ತಾಳ್ಮೆಯಿಂದ ಸಹಿಸಿಕೊಳ್ಳುವ ವಿಷಯದಲ್ಲಿ ಕರ್ತನ ಹೆಸರಿನಿಂದ ಮಾತಾಡಿದ ಪ್ರವಾದಿಗಳನ್ನೇ" ಮಾದರಿಮಾಡಿಕೊಳ್ಳಿರಿ ಎಂದು ತಿಳಿಸಿದ್ದಾನೆ.[1]

ಈ ಪ್ರಸ್ತಾಪದ ಹಿನ್ನೆಲೆಯಲ್ಲಿ ಯಾಕೋಬನು ಒಂದು ಆಲೋಚನೆಯನ್ನು ತಿಳಿಸಿ, ನಿಮ್ಮ ವೇದನೆ ದುಃಖ ಪ್ರಿಯರನ್ನು ಕಳಕೊಂಡಾಗ ಉಂಟಾಗುವ ದುಃಖ ಮಾನಸಿಕತೊಂದರೆ ಅಥವಾ ಕಣ್ಣೀರು ಈ ತೊಂದರೆಗಳು ಉಂಟಾಗುವಾಗ ಪ್ರಾರ್ಥನೆಯ ಕಡೆಗೆ ತಿರುಗಿಕೊಳ್ಳಿರಿ ಎಂದು ತಿಳಿಸುತ್ತಾನೆ. ಪ್ರಾರ್ಥನೆಯ ಮೂಲಕ ದೇವರು ನೀಗಿಸುವ ಕೊರತೆಗಳಿಗಾಗಿ ದೇವರಿಗೆ ಸ್ತೋತ್ರ ಮಾಡುವದನ್ನು ಮರೆಯಬೇಡಿರಿ, ಆತನ ಪ್ರೀತಿಯ ನಿಮಿತ್ತ ಉಂಟಾದ ಬಲಕ್ಕಾಗಿ ಕೃತಜ್ಞರಾಗಿರ್ರಿ.

ನಂತರ, ಅನಾರೋಗ್ಯದ ಸಮಯದಲ್ಲಿ ಪ್ರಾರ್ಥನೆಯ ಮೂಲಕವಾಗಿ ದೇವರನ್ನು ಅವಲಂಭಿಸಬೇಕು. ಎಂದು ಯಾಕೋಬನು ತಿಳಿಸುತ್ತಾನೆ, "ನಿಮ್ಮಲ್ಲಿ ಅಸ್ವಸ್ಥನಾಗಿರುವವನು ಇದ್ದಾನೋ? ಅವನು ಸಭೆಯ ಹಿರಿಯರನ್ನು ಕರೆಕಳುಹಿಸಲಿ, ಅವನು ಕರ್ತನ ಹೆಸರಿನಿಂದ ಎಣ್ಣೆ ಹಚ್ಚಿ ಅವನಿಗೋಸ್ಕರ ದೇವರನ್ನು ಪ್ರಾರ್ಥಿಸಲಿ. ನಂಬಿಕೆಯಿಂದ ಮಾಡಿದ ಪ್ರಾರ್ಥನೆಯು ರೋಗಿಯನ್ನು ರಕ್ಷಿಸುವದು ..." (5:14, 15ಎ). ಆ ವಚನಗಳನ್ನು ನಾವು ಓದುವಾಗ, ಆ ವ್ಯಾಖ್ಯಾನದಲ್ಲಿರುವ ಸಿದ್ಧಾಂತದ ಕುರಿತಾಗಿ ವಾಗ್ವಾದಗಳನ್ನು ಮಾಡುತ್ತೇವೆ, ಮತ್ತು ಅಲ್ಲಿರುವ ಯಾಕೋಬನ ಮುಖ್ಯವಾದ ಉದ್ದೇಶವನ್ನು ಮರೆತುಬಿಡುತ್ತೇವೆ, ಅದೇನೆಂದರೆ: *"ಅನಾರೋಗ್ಯದಲ್ಲಿರುವವರಿಗಾಗಿ ಪ್ರಾರ್ಥಿಸಿರಿ"* ಎಂಬದೇ. ಪ್ರಾರ್ಥನೆಯು ದೇವರ ಕಡೆಗೆ ತಿರುಗಿಕೊಳ್ಳುವ ಬಹು ಪ್ರಾಮುಖ್ಯವಾದ ದೈಹಿಕ ಸಂಗತಿಯಾಗಿರುತ್ತದೆ (1 ಪೇತ್ರ 5:6). ಮನುಷ್ಯನನ್ನು ಯಾವುದು ಗುಣಪಡಿಸುತ್ತದೆ? "ನಂಬಿಕೆಯಿಂದ ಮಾಡಿದ ಪ್ರಾರ್ಥನೆ" ಎಂದು ಯಾಕೋಬನು ಉತ್ತರಿಸುತ್ತಾನೆ. ನಾವು ಕೇಳುವದನ್ನು ಕರ್ತನು ಅನುಗ್ರಹಿಸುತ್ತಾನೆ ಎಂದು ನಂಬುವುದೇ ನಂಬಿಕೆಯ ಪ್ರಾರ್ಥನೆಯಾಗಿದೆ (1:6; 1 ಯೋಹಾನ 5:14).

ನಂಬಿಕೆಯಿಂದ ಕೇಳುವಾಗಲೂ ಕೆಲವರು ಸ್ವಸ್ಥತೆ ಹೊಂದುವದಿಲ್ಲ! ಅನಾರೋಗ್ಯ ಹೊಂದಿದವರು ಯಾವಾಗಲೂ ಸ್ವಸ್ಥತೆ ಹೊಂದುತ್ತಾರೆಯೇ? ಇಲ್ಲ ಎಂದು ಹೇಳು

ವಾಗ ಅಪಾರ್ಥಮಾಡಬೇಡಿರಿ. ನಮ್ಮ ಪ್ರಾರ್ಥನೆಗಳನ್ನು ದೇವರು ಆಲಿಸಿ, ಪ್ರಪಂಚದಲ್ಲಿ ಕಾರ್ಯಗಳನ್ನು ಬದಲಾಯಿಸುತ್ತಾನೆ ಎಂಬ ಮನವರಿಕೆ ನನಗೆ ಉಂಟು. ಯೆಹೆಜ್ಕೇಲನಿಗೆ ದೇವರು ಹದಿನೈದು ವರುಷಗಳನ್ನು ಅವನ ಆಯುಷ್ಯಕ್ಕೆ ಸೇರಿಸಿರುವ ಉದಾಹರಣೆಯು (2 ಅರಸು 20)ರಲ್ಲಿ ಕಾಣುತ್ತೇವೆ. ಇದು ಅವನ ಪ್ರಾರ್ಥನೆಗೆ ಉತ್ತರವಾಗಿತ್ತು. ನಮಗೆ ಅರ್ಥವಾ ಗುವಂತ ಮುಖ್ಯವಾದ ವಾಕ್ಯವನ್ನು 1 ಯೋಹಾನ 5:14ರಲ್ಲಿ ನೋಡುತ್ತೇವೆ. "ನಾವು ಆತನ *ಚಿತ್ತಕ್ಕೆ ತಕ್ಕಂತೆ ಕೇಳಿಕೊಳ್ಳಬೇಕು* ... ." (ಒತ್ತಿ ಹೇಳಿದ್ದು ನನ್ನದು.) ದೇವರ ಚಿತ್ತವನ್ನು ತಿಳಿಯದೆ, ಕೆಲವು ವಿಷಯಗಳನ್ನು ದೇವರಿಂದ ತುತ್ತಾಗಿ ಕೇಳಿಕೊಳ್ಳುತ್ತೇವೆ. ನಾವು ಗೆತ್ಸೆಮನೆ ತೋಟಕ್ಕೆ ಹೋಗಿ, ಯೇಸು ಕ್ರಿಸ್ತನು ಪ್ರಾರ್ಥಿಸಿದ ರೀತಿಯನ್ನು ಗಮನಿಸಬೇಕು. ನಮ್ಮ ಕೋರಿಕೆಯನ್ನು ದೇವರಿಗೆ ತಿಳಿಯಪಡಿಸುವುದು ತಪ್ಪಾಗಿರುವದಿಲ್ಲಾ ಅದರ ಕುರಿತಾದ ಚಿತ್ತವನ್ನು ತಿಳುಕೊಳ್ಳಲು ಬಲವನ್ನೂ ಮತ್ತು ಧೈರ್ಯವನ್ನೂ ಹೊಂದಿರಬೇಕು.

ನಾವು ಪಾಪದ ಸಂಕೋಲೆಯಲ್ಲಿ ಸಿಕ್ಕಿ ಬೀಳುವಾಗ, ದೇವರನ್ನು ಪ್ರಾರ್ಥಿಸಬೇಕೆಂಬ ಮೂರನೆಯ ಸಂಗತಿಯನ್ನು ಯಾಕೋಬನು ತಿಳಿಸುತ್ತಾನೆ. ಅವನು ವಚನ 15ಬಿ ಮತ್ತು 16ರಲ್ಲಿ, "... ಮತ್ತು ಪಾಪ ಮಾಡಿದವನಾಗಿದ್ದರೆ ಅದು ಪರಿಹಾರವಾಗುವದು ಹೀಗಿರಲು ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋ ಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ." ಈ ವಾಕ್ಯದ ಹಿನ್ನೆಲೆಯಲ್ಲಿ, ವಚನ 15ರ ಎರಡನೆಯ ಭಾಗದಲ್ಲಿ ನಮೂದಾಗಿರುವ ವ್ಯಕ್ತಿಯ ಕುರಿತಾಗಿಯೇ ವಚನ 14 ಮತ್ತು 15ರ ಮೊದಲ ಭಾಗದಲ್ಲಿ ನೋಡುತ್ತೇವೆ. ವೈಯಕ್ತಿಕವಾದ ಪಾಪದ ನಿಮಿತ್ತವೇ ಪಾಪವು ಉದ್ಭವಿಸುತ್ತದೆ. ಎಂಬ ತಾತ್ಪರ್ಯವಲ್ಲ, ಅನಾರೋಗ್ಯದ ಸಮಯದಲ್ಲಿ ಒಬ್ಬನು, ತಾನು ಆರೋಗ್ಯದಲ್ಲಿರು ವಾಗ ದೇವರನ್ನು ತಿರಸ್ಕರಿಸಿದ್ದನು ಎಂದು ಅರಿತು ಈ ಪಾಪವನ್ನು ದೇವರಲ್ಲಿ ಅರಿಕೆ ಮಾಡಿ, ದೇವರಿಂದ ಕ್ಷಮಾಪಣೆಯನ್ನು ಬೇಡುವನು ಎಂಬ ಬೋಧನೆಯೂ ಇರಬಹುದು. ಪಾಪ ಮಾಡಿದ ದೇವರ ಮಗನನ್ನು ಕ್ಷಮಿಸುವ ವಿಷಯದಲ್ಲಿ ದೇವರು ಒಂದು "ಕರಾ ರನ್ನು" ಇಟ್ಟಿದ್ದಾನೆ. ಅದು ಯೋಹಾನನು ತಿಳಿಸಿದಂತೆಯೇ ಇರುತ್ತದೆ. "ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು" (1 ಯೋಹಾನ 1:9). ಒಬ್ಬನು ತನ್ನ ಪಾಪವನ್ನು ಅರಿಕೆ ಮಾಡುವಲ್ಲಿ ದೀನನಾಗಿರಬೇಕು ಎಂದು ಯೋಹಾ ನನೂ ಮತ್ತು ಯಾಕೋಬನೂ ತಿಳಿಸುತ್ತಿದ್ದಾರೆ. ದೇವರಿಗೂ ಮತ್ತು ಮನುಷ್ಯರಿಗೂ ಅರಿಕೆ ಮಾಡಬೇಕು, ಮತ್ತು ಶುದ್ಧತೆಗಾಗಿ ದೇವರಲ್ಲಿ ಬೇಡಿಕೊಳ್ಳಬೇಕು. "ಮಾಡ ಲೇಬೇಕಾದ" ಅಥವಾ ಪದ್ಧತಿಯ ಮೇರೆಗೆ ಸಭೆಯಲ್ಲಿ ಮಾಡುವ "ಅರಿಕೆಯ" ಕುರಿತಾಗಿ ಈ ವಾಕ್ಯವು ತೀವ್ರವಾಗಿ ಬೋಧಿಸುವದಿಲ್ಲ, ನಿಶ್ಚಿತವಾಗಿ ಆ ಕಾರ್ಯವು ಸಹ ಇದರಲ್ಲಿ ಒಳಗೊಂಡಿರಬಹುದು. ಇಲ್ಲಿ ಅರಿಕೆಯ ಕ್ರಮವನ್ನು ಪ್ರತಿಪಾದಿಸುತ್ತಿಲ್ಲ. ವಿವಿಧ ರೀತಿಯಲ್ಲಿ ಇದನ್ನು ಸಹಜವಾಗಿ ಮಾಡಬಹುದು - ಸಭೆಯಲ್ಲಿ ವಚನ 15, 16, ಹಿರಿಯರ ಸಮ್ಮುಖದಲ್ಲೂ ಪರಸ್ಪರ ಸಹೋದರರು, ಅಥವಾ ಯಾರಿಗಾದರೂ ನಾವು ನೋವುಂಟುಮಾಡಿದ್ದರೆ, ಅವರ ಬಳಿಯಲ್ಲೂ ನಿರ್ದಿಷ್ಟವಾದ ಸಮಯದಲ್ಲಿ ಅರಿಕೆಯನ್ನು ಮಾಡಬಹುದು. ಅದು *ಯಾವ* ರೀತಿ ಯಲ್ಲಿ ಇರಬೇಕು ಎಂದು ಒತ್ತಿ ಹೇಳಿದೆ, ಅರಿಕೆಯ ಪ್ರಾರ್ಥನೆಯ ಅಗತ್ಯದ ಕುರಿತಾಗಿ ಯಾಕೋಬನು ತಿಳಿಸುತ್ತಿದ್ದಾನೆ.

## ಪರಿಣಾಮಕಾರಿಯಾದ ಪ್ರಾರ್ಥನೆಯ ಅದ್ಭುತ ಶಕ್ತಿ

ಪ್ರಾರ್ಥನೆಯ ಅಗತ್ಯವಿರುವ ಸಂದರ್ಭಗಳ ಕುರಿತಾದ ಮಾಹಿತಿಯನ್ನು ಪಡೆದ ನಂತರ ಯಾಕೋಬನು, "... ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ" (5:16ಬಿ). "ನೀತಿವಂತನಾದ" ಮನುಷ್ಯನು ಅರಿಕೆ ಮಾಡಿದಾದ ಅವನು ಕ್ಷಮಿಸಲ್ಪಟ್ಟಿದ್ದಾನೆ

ಎಂಬ ಸೂಚನೆಯಾಗಿದೆ. ಅಂಥಹ ಮನುಷ್ಯನ ಪ್ರಾರ್ಥನೆಗೆ ಉತ್ತರವು ದೊರೆಯುತ್ತದೆ. ಯಾಕೋಬನು ಇದರ ಅರ್ಥವನ್ನು ಒಂದು ಉದಾಹರಣೆಯ ಮೂಲಕ ತಿಳಿಸುತ್ತಾನೆ. "ಎಲೀಯನು ನಮ್ಮಂಥ ಸ್ವಭಾವವುಳ್ಳವನಾಗಿದ್ದನು; ಅವನು ಮಳೆ ಬರಬಾರದೆಂದು ಯಥಾರ್ಥವಾಗಿ ಪ್ರಾರ್ಥಿಸಲು ಮೂರು ವರುಷ ಆರು ತಿಂಗಳವರೆಗೂ ಮಳೆ ಬೀಳಲಿಲ್ಲ, ತಿರಿಗಿ ಅವನು ಪ್ರಾರ್ಥನೆ ಮಾಡಲು ಆಕಾಶವು ಮಳೆಗರೆಯತು, ಭೂಮಿಯು ಬೆಳೆಯಿತು" (5:17, 18). "ಎಲೀಯನು ನಮ್ಮ ಸ್ವಭಾವದವನೇ ಆಗಿದ್ದನು" ಎಂದು ಪುನಃ ನೆನಪು ಮಾಡಿ ಅವನ ಮಾದರಿಯ ಮೂಲಕ ಪ್ರಾರ್ಥನೆ ಮತ್ತು ಅದರ ಶಕ್ತಿಯ ಕುರಿತಾಗಿ ಕಲಿತುಕೊಂಡಿದ್ದೇವೆ, ನಂತರ ಅದು *ಹೇಗೆ* ಎಂದು ಪ್ರಶ್ನಿಸುತ್ತೇವೆ? ನಮಗೆ ಅನುಗ್ರಹವಾಗಿರುವ ಮೂಲದ ಮುಖಾಂತರವೇ, ಎಲೀಯನೂ ತನ್ನ ಶಕ್ತಿಯನ್ನು ಪಡೆದನು. ಬಲ ಮತ್ತು ಶಕ್ತಿಯು ದೇವರಿಂದ ಮಾತ್ರ ದೊರಕುತ್ತವೆ. ಪ್ರಾರ್ಥನೆಯು, ನಮ್ಮನ್ನು ಬದಲಾಯಿಸಿ, ದೇವರನ್ನೇ ನಾವು ಅವಲಂಭಿಸುವಂತೆ ಮಾಡವುದು ಮಾತ್ರವಲ್ಲದೆ, ಅದರ ಮೂಲಕ ದೇವರು ನಮಗಾಗಿ ಕಾರ್ಯಗಳನ್ನು ಸಹ ಬದಲಾಯಿಸುತ್ತಾನೆ.

## ಮುಕ್ತಾಯ

ಪ್ರಾರ್ಥಿಸದ ಹೊರತು, ನಾವು ಹೊಂದಬಹುದಾದ ಆಶೀರ್ವಾದಗಳನ್ನು ಕಳಕೊಳ್ಳುತ್ತೇವೆ. ಅವುಗಳು ಆತ್ಮಿಕ ಅಭಿವೃದ್ಧಿಗೂ ಮತ್ತು ದೇವರ ಮಹಿಮೆಗೂ ಸಹಾಯಕವಾಗುವ ಆಶೀರ್ವಾದಗಳೇ. ಹೆರ್ನಿಫೋರ್ಡ್‌ರವರು ಒಂದು ಸಾರಿ ಒಂದು ಮಿಲಿಯನ್ ಡಾಲರ್ ಮೊತ್ತದ ವಿಮೆಯನ್ನು ಮಾಡಿಸಿದ್ದರು. ಅವನ ವಿಮಾಕಂಪನಿಯಲ್ಲಿದ್ದ ಅವನ ಸ್ನೇಹಿತನು ಆ ವಿಮೆಯನ್ನು ಯಾಕೆ ಅವನು ತನ್ನಿಂದ ಪಡೆಯಲಿಲ್ಲ ಎಂದು ಕೇಳಿದನು, "ನೀನು ನನ್ನಲ್ಲಿ ವಿಮೆಗಾಗಿ ಕೇಳಲಿಲ್ಲ ಎಂಬುದೇ" ಹೆನ್ರಿಫೋರ್ಡ್‌ರವರ ಉತ್ತರವಾ ಗಿತ್ತು.

ನಾವು ಪ್ರಾರ್ಥನೆಯ ಮೂಲಕ ಕಳೆದ ಇರುವದರ ನಿಮಿತ್ತ ಕಳಕೊಂಡಿರುವ ಎಲ್ಲಾ ಒಳ್ಳೆ ಆಶೀರ್ವಾದಗಳ ಕುರಿತು ಯೋಚಿಸಲಿ? ನಂಬಿಕೆಯು ವ್ಯತ್ಯಾಸಗಳನ್ನು ಮಾಡುತ್ತದೆ, ಆ ಬೋಧನೆಗಳಲ್ಲಿರುವ ವ್ಯತ್ಯಾಸವನ್ನೂ ಯಾಕೋಬನು ತಿಳಿಸುತ್ತಾನೆ:

1. ದೇವರೊಂದಿಗೆ ನಿತ್ಯ ಸಂಪರ್ಕದಲ್ಲಿರಿ.
2. ನಿಮ್ಮ ಅಗತ್ಯಗಳನ್ನು ದೇವರು ಪೂರೈಸುವನು ಎಂಬ ಭರವಸೆಯಿಂದ ಪ್ರಾರ್ಥಿಸಿರಿ.
3. ನಮ್ಮ ಬಲಹೀನತೆಯನ್ನು ಮತ್ತು ಪಾಪವನ್ನು ಅರಿಕೆ ಮಾಡೋಣ, ಆತನನ್ನೆ ಅವಲಂಭಿಸಿ, ಆತನಿಗೆ ನಮ್ಮನ್ನು ಸಮರ್ಪಿಸಿಕೊಳ್ಳೋಣ.

---

ಟಿಪ್ಪಣಿ

[1]J. W. Roberts, *The Living Word Commentary,* "The Letter of James" (Austin, Tex.: Sweet Publishing Co., 1977), 162.